# ರಾಮಕೃಷ್ಣ ಮಹಾಸಂಘಕ್ಕೆ ಗಾಂಧೀ ಶಾಂತಿಪ್ರಶಸ್ತಿ

ಭಾರತ ಸರ್ಕಾರವು ಮಹಾತ್ಮಾ ಗಾಂಧೀಜಿಯವರ ೧೨೫ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ (೧೯೯೫) ಅಂತರರಾಷ್ಟ್ರೀಯ ಗಾಂಧೀ ಶಾಂತಿಪ್ರಶಸ್ತಿಯನ್ನು ಪ್ರಾರಂಭಿಸಿತು. ಗಾಂಧೀಜಿಯವರ ಅಹಿಂಸಾತತ್ತ್ವವನ್ನು ಆಧರಿಸಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪುನರುತ್ಥಾನಕ್ಕಾಗಿ ಶ್ರಮಿಸುವವರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ.

ಇದು ಭಾರತ ಸರ್ಕಾರವು ನೀಡುವ ಅತ್ಯುನ್ನತ ವಾರ್ಷಿಕ ಪ್ರಶಸ್ತಿ. ಈ ಪ್ರಶಸ್ತಿಯ ತೀರ್ಪುಗಾರರ ಮಂಡಲಿಯಲ್ಲಿ ಭಾರತದ ಪ್ರಧಾನಮಂತ್ರಿಗಳು, ಲೋಕಸಭೆಯ ವಿರೋಧಪಕ್ಷನಾಯಕರು, ಭಾರತದ ಮುಖ್ಯನ್ಯಾಯಾಧೀಶರು ಮತ್ತು ಇಬ್ಬರು ಪ್ರಮುಖ ವ್ಯಕ್ತಿಗಳು ಇರುವರು. ಈ ಪ್ರಶಸ್ತಿಯು ಒಂದುಕೋಟಿ ನಗದುಹಣ, ಪ್ರಶಸ್ತಿಪತ್ರ ಮತ್ತು ಫಲಕವನ್ನು ಒಳಗೊಂಡಿರುತ್ತದೆ.

೧೯೯೮ನೆ ಸಾಲಿನ ಗಾಂಧೀ ಶಾಂತಿಪ್ರಶಸ್ತಿಯನ್ನು ರಾಮಕೃಷ್ಣ ಮಹಾಸಂಘಕ್ಕೆ ನೀಡಲಾಯಿತು. ಸಂಘದ ಪರವಾಗಿ ಅದರ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ರಂಗನಾಥಾನಂದಜಿ ಮಹಾರಾಜ್ ಅವರು ಭಾರತದ ಅಧ್ಯಕ್ಷರಾದ ಶ್ರೀ ಕೆ. ಆರ್. ನಾರಾಯಣನ್ ಅವರಿಂದ ಕಲ್ಕತ್ತದ ರಾಜಭವನದಲ್ಲಿ ೧೯೯೯, ಫೆಬ್ರವರಿ ೧೨ರಂದು ಪ್ರಶಸ್ತಿಯನ್ನು ಸ್ವೀಕರಿಸಿದರು. ಆ ಸಂದರ್ಭದಲ್ಲಿ ನೀಡಿದ ಪ್ರಶಸ್ತಿಪತ್ರದ ಕನ್ನಡಾನುವಾದ ಈ ಕೆಳಗಿನಂತಿದೆ.

ಸತ್ಯ ಮತ್ತು ಅಹಿಂಸೆಗಳನ್ನು ರಕ್ಷಿಸುವುದು, ರೋಗ ಮತ್ತು ದುಃಖನಿವಾರಣೆ, ಅನಾಥರು ಮತ್ತು ನಿರ್ಗತಿಕರಿಗೆ ಆಶ್ರಯ ನೀಡುವುದು — ಇವು ಮಾವವಕೋಟಿಯು ಎದುರಿಸುತ್ತಿರುವ ಶಾಶ್ವತ ಸವಾಲುಗಳು. ಇಂತಹ ಮೂಲಭೂತ ವಿಷಯದಲ್ಲಿ ತಮ್ಮನ್ನು ತೊಡಗಿಸಿಕೊಂಡ ಶಿಖರಪ್ರಾಯ ವ್ಯಕ್ತಿಗಳಲ್ಲಿ ಮಹಾತ್ಮಾ ಗಾಂಧೀಜಿಯವರು ಒಬ್ಬರು.

ಗಾಂಧೀಜಿಯವರು ನಮ್ಮ ಇತಿಹಾಸ ಮತ್ತು ಸಂಸ್ಕೃತಿಯ ಸಾರಭೂತ ವ್ಯಕ್ತಿ. 'ಭಾರತವಲ್ಲದೆ ಮತ್ತಾವ ದೇಶಕ್ಕೂ, ಹಿಂದೂ ಧರ್ಮವಲ್ಲದೆ ಮತ್ತಾವ ಧರ್ಮಕ್ಕೂ ಗಾಂಧೀಜಿಯವರನ್ನು ಸೃಷ್ಟಿಸಲಾಗುತ್ತಿರಲಿಲ್ಲ' ಎಂದು ಹೇಳಲಾಗಿದೆ. ಗಾಂಧೀಜಿಯವರು ಸಮಾಜಸುಧಾರಕರು ಮತ್ತು ಕರ್ಮಯೋಗಿಗಳು. ಅವರ ಪಾಲಿಗೆ ದೇಶ ಮತ್ತು ಧರ್ಮ ಎರಡು ಕಣ್ಣುಗಳಿದ್ದಂತೆ, ಮತ್ತು ಅವರ ಜೀವನವೇ ಒಂದು ಸಂದೇಶವಾಗಿತ್ತು.

ಗಾಂಧೀಜಿಯವರ ವಿಶ್ವದೃಷ್ಟಿಯನ್ನು ಪ್ರತಿಬಿಂಬಿಸುವ ಚಿಂತನಾಧಾರೆಯನ್ನು ಹೊಂದಿದ್ದು ಅದೇ ಬೆಳಕಿನಲ್ಲಿ ಕಾರ್ಯತತ್ಪರರಾಗಿರುವವರನ್ನು ಗೌರವಿಸುವುದಕ್ಕಾಗಿ ಭಾರತ ಸರ್ಕಾರವು ಗಾಂಧೀ ಶಾಂತಿಪ್ರಶಸ್ತಿಯನ್ನು ಪ್ರಾರಂಭಿಸಿತು. ಒಂದು ಸಂಸ್ಥೆಗೆ ಈ ಪ್ರಶಸ್ತಿಯನ್ನು ನೀಡುತ್ತಿರುವುದು ಇದೇ ಮೊದಲು. ೧೮೯೭, ಮೇನಲ್ಲಿ ಸ್ವಾಮಿ ವಿವೇಕಾನಂದರಿಂದ ಸ್ಥಾಪಿತವಾದ ರಾಮಕೃಷ್ಣ ಮಹಾಸಂಘವು ಶ್ರೀರಾಮಕೃಷ್ಣ ಪರಮಹಂಸರ ಸಂದೇಶವನ್ನು ಪ್ರತಿಬಿಂಬಿಸುತ್ತದೆ. ಅವರ ಜೀವನವೇ ಧರ್ಮಾನುಷ್ಠಾನದ ಒಂದು ಕಥೆ ಎಂದು ಶ್ರೀರಾಮಕೃಷ್ಣರ ಬಗ್ಗೆ ಗಾಂಧೀಜಿಯವರು ಹೇಳುತ್ತಾರೆ.

ಶ್ರೀರಾಮಕೃಷ್ಣ ಮತ್ತು ಅವರ ಶ್ರೇಷ್ಠ ಶಿಷ್ಯರಾದ ಸ್ವಾಮಿ ವಿವೇಕಾನಂದರು ನೈಜ ಭಾರತೀಯ ಚಾರಿತ್ರ್ಯದ ಸಂಕೇತಗಳಾಗಿದ್ದರು. ಅವರು ಆಧ್ಯಾತ್ಮಿಕ ಶಕ್ತಿ, ವೈಜ್ಞಾನಿಕ ಮನೋಭಾವ, ಸರ್ವಗ್ರಾಹಿ ಅನುಕಂಪೆ ಮತ್ತು ವಿಶ್ವಭ್ರಾತೃತ್ವ—ಈ ಗುಣಗಳ ಮೂರ್ತರೂಪವಾಗಿದ್ದರು. ಶ್ರೀರಾಮಕೃಷ್ಣರ ಸರ್ವಧರ್ಮ ಏಕತೆಯ ಸಂದೇಶವನ್ನು ಆಧ್ಯಾತ್ಮಿಕ ಕ್ರಿಯಾತತ್ತ್ವವಾಗಿ ಮಾರ್ಪಡಿಸಿದವರು ಸ್ವಾಮಿ ವಿವೇಕಾನಂದರು. ಸನಾತನ ವೇದಾಂತ ತತ್ತ್ವವನ್ನು ಆಧುನಿಕ ವೈಜ್ಞಾನಿಕ ಮನಸ್ಸಿನವರಿಗೆ ಅರ್ಥವಾಗುವ ರೀತಿಯಲ್ಲಿ ಸ್ವಾಮಿ ವಿವೇಕಾನಂದರು ವಿವರಿಸಿ ಹೇಳಿದರು. ಇದರ ಮೂಲಕ ಅವರು ಅಧ್ಯಾತ್ಮವಿದ್ಯೆ ಮತ್ತು ವೈಜ್ಞಾನಿಕ ಜ್ಞಾನಗಳ ನಡುವೆ ಸೇತುಬಂಧ ವನ್ನೇರ್ಪಡಿಸಿದರು. ಸ್ವಾಮಿ ವಿವೇಕಾನಂದರ ಪ್ರಕಾರ ಧರ್ಮವೂ ಒಂದು ವಿಜ್ಞಾನವೇ ಮತ್ತು ಆಧುನಿಕ ವಿಜ್ಞಾನದ ಆವಿಷ್ಕಾರಗಳು ವೇದಾಂತವನ್ನು ಪ್ರತಿಧ್ವನಿಸುತ್ತಿರುವುದನ್ನು ಕೇಳಬಹುದು.

**ಶ್ರೀರಾಮಕೃಷ್ಣರ ಸರ್ವಧರ್ಮ ಏಕತೆಯ ಸಂದೇಶವನ್ನು ಆಧ್ಯಾತ್ಮಿಕ ಕ್ರಿಯಾತತ್ತ್ವವಾಗಿ ಮಾರ್ಪಡಿಸಿದವರು ಸ್ವಾಮಿ ವಿವೇಕಾನಂದರು.**

ಇಂದಿನ ವಿಜ್ಞಾನ ಮತ್ತು ತಾಂತ್ರಿಕಯುಗದಲ್ಲಿ ಸೌಂದರ್ಯಪ್ರಜ್ಞೆ ಮತ್ತು ಅಧ್ಯಾತ್ಮಪ್ರಜ್ಞೆಗಳೆರಡನ್ನೂ ಬೆಳಸಿಕೊಳ್ಳುವುದು

ಅಗತ್ಯ. ಮಾನವನು ಕುಂಬಾರನ ತಿರುಗು ಚಕ್ರದ ಮೇಲಿರುವ ಮಣ್ಣು ಮುದ್ದೆಯಂತಲ್ಲ. ಅವನು ಸಾಮಾಜಿಕ ಪರಿಸರದ ಒಡೆಯನೂ ಹೌದು ಹಾಗೂ ಹಿಂದಿನ ಶ್ರೇಷ್ಠ ಪರಂಪರೆಯ ಉತ್ತರಾಧಿಕಾರಿಯೂ ಹೌದು. ಅವನಲ್ಲಿ ಕೌತುಕ ಮನಸ್ಸಿದೆ, ಅಂತರ್ದೃಷ್ಟಿಯ ಹೃದಯವಿದೆ, ಸಂವೇದನಾ ಸಾಮರ್ಥ್ಯವಿದೆ ಮತ್ತು ಅನ್ವೇಷಣಾ ಪ್ರವೃತ್ತಿಯಿದೆ. ಅವನಿಗೆ ಜೀವನವೃಕ್ಷವೂ ಕಬ್ಬಿಣದ ಕಂಬಿಯಷ್ಟೇ ಮುಖ್ಯ. ಈ ಆದರ್ಶದ ಪ್ರಾಮುಖ್ಯವನ್ನು ಅರಿತುಕೊಂಡು ರಾಮಕೃಷ್ಣ ಮಹಾಸಂಘವು ನಮ್ಮ ಸಂಸ್ಕೃತಿ ಪರಂಪರೆಗೆ ಸಂಬಂಧಿಸಿದ ಹಲವಾರು ಗ್ರಂಥಗಳನ್ನು ಪ್ರಕಟಿಸಿದೆ. ನಮ್ಮ ಪುರಾತನ ಭವ್ಯಪರಂಪರೆಯನ್ನು ಬೆಳಗಿಸಿ ಸಂಘವು ನಾವು ಎಂತಹ ಸುಂದರ ಮಂದಿರದಲ್ಲಿ ಜನ್ಮತಾಳಿರುವೆವು ಎಂಬುದರ ಅರಿವನ್ನು ನಮಗೆ ಉಂಟು ಮಾಡಿರುವುದು.

'ಬ್ರಹ್ಮನಿದ್ದಾನೆ' ಎನ್ನುವುದಕ್ಕೂ 'ಬ್ರಹ್ಮನೇ ನಾನಾಗಿದ್ದೇನೆ' ಎನ್ನುವುದಕ್ಕೂ ಬಹಳ ಅಂತರವಿದೆ. ಮೊದಲನೆಯದು ಪರೋಕ್ಷ ಜ್ಞಾನ, ಎರಡನೆಯದು ಅಪರೋಕ್ಷಜ್ಞಾನ. 'ದೇವರಿದ್ದಾನೆ' ಎಂದು ಹೇಳುವುದರ ಬದಲು ತಮ್ಮೊಳಗೇ ಇರುವ ದೇವರನ್ನು ಜನರು ಕಂಡುಕೊಳ್ಳಲು ಸಹಾಯ ಮಾಡಿದರೆ, ದಿವ್ಯ ಜ್ಯೋತಿಕಿರಣ ಸ್ಪರ್ಶ ದಿಂದ ಮಾನವಚೇತನವು ಪ್ರಸ್ಫುರಿಸುತ್ತದೆ. ಮಾನವರು ಕೇವಲ ಅಸ್ಥಿಮಾಂಸಗಳ ಹಂದರವಾಗಿ ಉಳಿಯದೆ ಸತ್ಯದ ಹರಿಕಾರ ರಾಗುತ್ತಾರೆ. ದಿವ್ಯತೆಯನ್ನು ನೇರವಾಗಿ ಸಂಪರ್ಕಿಸುವುದು ದಿವ್ಯತೆಯ ಅಗಾಧತೆಯನ್ನು ಅಳೆಯುವುದು ಮತ್ತು ಅನುಕಂಪೆಯ ಭಾವವನ್ನು ರೂಢಿಸಿಕೊಳ್ಳುವುದು—ಇದೇ ಧರ್ಮದ ಸಾರ. ವಿವೇಕಾನಂದರು ದಿವ್ಯತೆಯ ಅಪರೋಕ್ಷಾನುಭವವನ್ನು ಪಡೆದ ಅಧ್ಯಾತ್ಮ ಪ್ರವಾದಿ ಯಾಗಿದ್ದರು. ಅವರ ಪಾಲಿಗೆ ಸಾಮಾಜಿಕ ಮತ್ತು ಆಧ್ಯಾತ್ಮಿಕ ಎರಡೂ ಅರ್ಥಗಳಲ್ಲಿ ನರಸೇವೆಯೇ ನಾರಾಯಣ ಸೇವೆಯಾಗಿತ್ತು.

ವಿವೇಕಾನಂದರಿಂದ ಪ್ರಾರಂಭಿತವಾದ ರಾಮಕೃಷ್ಣ ಮಹಾಸಂಘವು ಯಾವಾಗಲೂ ಕರ್ಮ ಮತ್ತು ಸೇವೆಯ ಕಡೆ ತನ್ನ ಗಮನವನ್ನು ಹರಿಸುತ್ತದೆ. ಸಂಘವು ತನ್ನದೇ ವೈಶಿಷ್ಟ್ಯವನ್ನು ವ್ಯಕ್ತ ಪಡಿಸಿರುವ ಸೇವಾಕ್ಷೇತ್ರಗಳು ಯಾವುವೆಂದರೆ—ಬರ ಪೀಡಿತರಿಗೆ ಪರಿಹಾರ ವಸತಿಗಳನ್ನು ಒದಗಿಸುವುದು, ಶಿಕ್ಷಣ ಸಂಸ್ಥೆಗಳ ಮೂಲಕ ಮಕ್ಕಳ ಮತ್ತು ಯುವಕರ ಸೇವೆ, ಕಲ್ಯಾಣ ಕೇಂದ್ರಗಳ ಮೂಲಕ ಪರಿಶಿಷ್ಟವರ್ಗದವರಿಗೆ ಮೂಲಭೂತ ಆವಶ್ಯಕತೆಗಳನ್ನು ಒದಗಿಸು ವುದು, ವೈದ್ಯಕೀಯ ಸೇವೆಯ ಮೂಲಕ ಜನರ ದುಃಖವನ್ನು ಪರಿಹರಿಸುವುದು, ಧರ್ಮಸಮನ್ವಯ ತತ್ತ್ವಬೋಧನೆ ಮತ್ತು ಅನುಷ್ಠಾನದ ಮೂಲಕ ಕೋಮು ಸೌಹಾರ್ದವನ್ನು ಉಂಟು ಮಾಡುವುದು ಇತ್ಯಾದಿ. ತನ್ನ ಸ್ವಂತ ಕಾರ್ಯಕ್ರಮಗಳ ಮೂಲಕ ಮತ್ತು ಭಗಿನಿ ಸಂಸ್ಥೆಯಾದ ಶ್ರೀ ಶಾರದಾಮಠದ ಮೂಲಕ ಮಹಿಳಾ ಅಭಿವೃದ್ಧಿ ಕಾರ್ಯವನ್ನೂ ಸಾಕಷ್ಟು ಮಾಡಿರುವುದು. ರಾಮಕೃಷ್ಣ ಮಹಾಸಂಘವು ಈಗ ೧೩೭ ಶಾಖೆಗಳನ್ನು ಹೊಂದಿದ್ದು, ಆಸ್ಪತ್ರೆಗಳು, ಶಾಲೆ ಕಾಲೇಜುಗಳು, ಔಷಧಾಲಯಗಳು, ಅನಾಥಾಶ್ರಮಗಳು, ವಿದ್ಯಾರ್ಥಿನಿಲಯಗಳು, ಗ್ರಾಮ ಹಾಗೂ ಗಿರಿಜನ ಕಲ್ಯಾಣ ಕೇಂದ್ರಗಳು —ಇವೇ ಮುಂತಾದ ಸಂಸ್ಥೆಗಳನ್ನು ನಡೆಸುತ್ತ ವಿಶಾಲ ಕಾರ್ಯಕ್ಷೇತ್ರವನ್ನು ಪಡೆದಿದೆ.

ದೇಶವಿದೇಶಗಳಲ್ಲಿ ರಾಮಕೃಷ್ಣ ಮಹಾಸಂಘವು ಜನರಿಗೆ ಶಾಂತಿ ಮತ್ತು ಸುಖದ ಮೂಲನೆಲೆಯಾಗಿದೆ. ಇದಕ್ಕೆ ಕಾರಣ ಅದು ನಿಃಸ್ವಾರ್ಥಸೇವೆಯನ್ನು ಭಗವತ್ಸಾಕ್ಷಾತ್ಕಾರದ ಒಂದು ಮಾರ್ಗವಾಗಿ ಪ್ರತಿಪಾದಿಸುವುದು. ಜಾತಿ, ಮತ ಅಥವಾ ಭಾಷಾ ಭೇದವಿಲ್ಲದೆ ಅದರ ಸೇವೆಯು ಎಲ್ಲರಿಗೂ ಸಲ್ಲುತ್ತದೆ. ವಿವಿಧ ಮತಾನು ಯಾಯಿಗಳು ವಾಸಿಸುವ ಭಾರತದಂತಹ ದೇಶದಲ್ಲಿ ಭ್ರಾತೃತ್ವ ಮತ್ತು ಸಹಿಷ್ಣುತಾಭಾವ ಅತ್ಯಂತ ಪ್ರಸ್ತುತವಾದುದು. ಗಾಂಧೀಜಿ ಯವರೂ ತಮ್ಮ ಜೀವನದುದ್ದಕ್ಕೂ ಇದೇ ಆದರ್ಶವನ್ನು ಇಟ್ಟುಕೊಂಡಿದ್ದವರು.

ರಾಮಕೃಷ್ಣ ಮಹಾಸಂಘವು ಗಾಂಧೀಜಿಯವರ ನಿಃಸ್ವಾರ್ಥ ಸಮಾಜಸೇವಾಭಾವವನ್ನು ಪ್ರತಿನಿಧಿಸುತ್ತದೆ. ಕಳೆದ ಒಂದು ನೂರು ವರ್ಷದಿಂದ ಸಂಘವು ಸಮರ್ಪಣ ಮನೋಭಾವದಿಂದ ಮಾನವ ಕೋಟಿಗೆ ಸಲ್ಲಿಸುತ್ತಿರುವ ಸೇವೆಯು ಗಾಂಧೀಜಿಯವರ ಚಿಂತನೆ ಯನ್ನೂ, ಅನುಷ್ಠಾನವನ್ನೂ ಪ್ರತಿಬಿಂಬಿಸುತ್ತದೆ. ಭಾರತ ಸರ್ಕಾರವು ೧೯೯೮ನೆ ಸಾಲಿನ ಗಾಂಧೀ ಶಾಂತಿಪ್ರಶಸ್ತಿಯನ್ನು ರಾಮಕೃಷ್ಣ ಮಹಾಸಂಘಕ್ಕೆ ನೀಡಿ ಗೌರವಿಸಿರುವುದು ಉಚಿತವೇ ಆಗಿದೆ. ❑

**ರಾಮಕೃಷ್ಣ ಮಹಾಸಂಘದ ಲಾಂಛನ**




**ಈ ಚಿತ್ರದಲ್ಲಿ ಕಾಣುವ ಸರೋವರದ ಅಲೆಗಳು ಕರ್ಮವನ್ನೂ ಕಮಲವು ಭಕ್ತಿಯನ್ನೂ ಉದಯಿಸುತ್ತಿರುವ ಸೂರ್ಯನು ಜ್ಞಾನವನ್ನೂ ಸುತ್ತಿಕೊಂಡಿರುವ ಸರ್ಪವು ಯೋಗ ಹಾಗೂ ಜಾಗೃತ ಕುಂಡಲಿನೀ ಶಕ್ತಿಯನ್ನೂ ಪ್ರತಿನಿಧಿಸುತ್ತವೆ. ಹಂಸವು ಪರಮಾತ್ಮನ ಪ್ರತೀಕವಾಗಿರುತ್ತದೆ.**

**ಕರ್ಮ, ಭಕ್ತಿ, ಜ್ಞಾನ ಮತ್ತು ಯೋಗ ಇವುಗಳ ಸಮನ್ವಯದ ಮೂಲಕ ಪರಮಾತ್ಮನ ದರ್ಶನ ಲಾಭವಾಗುತ್ತದೆ ಎಂಬುದು ಈ ಚಿತ್ರದ ಭಾವಾರ್ಥ.**

**– ಸ್ವಾಮಿ ವಿವೇಕಾನಂದ**

**ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ ||**

**ವ್ಯಕ್ತಿಯ ಆಧ್ಯಾತ್ಮಿಕ ಉನ್ನತಿಗಾಗಿಯೂ ಮತ್ತು ಜಗತ್ತಿನ ಹಿತಕ್ಕಾಗಿಯೂ ಶ್ರಮಿಸುವುದೇ ರಾಮಕೃಷ್ಣ ಮಹಾಸಂಘದ ಧ್ಯೇಯೋದ್ದೇಶ.**